1. ಪ್ರಶ್ನೋತ್ತರ:

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಲಾಲ್‌ಬಾಗ್ ಪ್ರದೇಶಾಭಿವೃದ್ಧಿಯ ಬಗ್ಗೆ

61(562) ಶ್ರೀ ಹ್ಯಾರಿಸ್ ಎನ್ ಎ:(ಶಾಂತಿನಗರ) ಮಾನ್ಯ ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಲಾಲ್‌ಬಾಗ್ ಪ್ರದೇಶದಲ್ಲಿ ಇಲಾಖೆಗೆ ಒಳಪಟ್ಟ ಜಮೀನಿನ ವಿಸ್ತೀರ್ಣವೆಷ್ಟು; ಅವುಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳೇನು;

ಆ) ಲಾಲ್‌ಬಾಗ್‌ಗೆ ಬರುವ ಪ್ರವಾಸಿಗರ ಸಂಖ್ಯೆಯಲ್ಲಾಗಿರುವ ಹೆಚ್ಚಳವೆಷ್ಟು ಹಾಗೂ ಇದರಿಂದ ಬಂದಂತಹ ಆದಾಯವೆಷ್ಟು? (ವಿವರ ನೀಡುವುದು)

ಇ) ಈ ಪ್ರದೇಶದಲ್ಲಿ ಬಂಡೆಗಳಿರುವ ಜಾಗದಲ್ಲಿ ರಾಕ್‌ಗಾರ್ಡನ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ? (ವಿವರ ನೀಡುವುದು)

ಶ್ರೀ ಉಮೇಶ್ ಎ ಕತ್ತಿ(ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು):

ಅ) ಲಾಲ್‌ಬಾಗ್ ಪ್ರದೇಶದ ಒಟ್ಟು ವಿಸ್ತೀರ್ಣ 240 ಎಕರೆಗಳು. ಲಾಲ್‌ಬಾಗ್‌ನ ಸಮಗ್ರ ಅಭಿವೃದ್ಧಿಗಾಗಿ ಕೆರೆ ಅಭಿವೃದ್ಧಿ ಮುತ್ಸ್ಯಾಲಯ ಕಟ್ಟಡ ಮತ್ತು ಕೃಂಬಿಗಲ್ ಹಾಲ್ ಪುನರ್ ನಿರ್ಮಾಣ, ಪ್ರಸ್ತುತ 4 ಕಡೆ ಶೌಚಾಲಯಗಳಿದ್ದು ಹೆಚ್ಚುವರಿಯಾಗಿ ಆಧುನಿಕ ಶೈಲಿಯ ಶೌಚಾಲಯಗಳನ್ನು ನಿರ್ಮಿಸುವುದು, ಮಳೆ ಬಂದಾಗ ಪ್ರವಾಸಿಗರು/ಸಾರ್ವಜನಿಕರಿಗೆ ರಕ್ಷಣೆ ಪಡೆಯಲು ರೇಯಿನ್ ಶೆಲ್ಟರ್ ನಿರ್ಮಿಸುವುದು, ಪ್ರಸ್ತುತ 12 ಕಡೆ ಕುಸಿಯುವ ನೀರಿನ ಘಟಕಗಳಿದ್ದು ಹೆಚ್ಚುವರಿಯಾಗಿ ನೀರಿನ ಘಟಕಗಳನ್ನು ನಿರ್ಮಿಸುವುದು, ಲಾಲ್‌ಬಾಗ್ ಒಂದು ಬಟಾನಿಕಲ್ ಗಾರ್ಡನ್ ಆಗಿದ್ದು, ಹಾಲಿ 2250 ಸಸ್ಯ ಪ್ರಬೇಧಗಳಿದ್ದು ವಿವಿಧ ಮೂಲಗಳಿಂದ ಹೊಸದಾಗಿ ದೇಶೀಯ ಹಾಗೂ ವಿದೇಶಿಯ ಸಸ್ಯ ಪ್ರಬೇಧಗಳನ್ನು ಹೆಚ್ಚಿಸುವ ಕಾರ್ಯ ಕೈಗೊಳ್ಳುವುದು, ಲಾಲ್‌ಬಾಗ್ ವ್ಯಾಪ್ತಿಯ ಗಾಜಿನ ಮನೆ, ಬ್ಯಾಂಡ್ ಸ್ಟಾಂಡ್, ರಾಜ್ ವೃತ್ತ, ಧನ್ವಂತರಿ ವನ, ಎಕನಾಮಿಕ್ ಗಾರ್ಡನ್

ತಾಕುಗಳಲ್ಲಿ ಹಂತಹಂತವಾಗಿ ಉದ್ಯಾನವನ್ನು ನವೀಕರಿಸಿ, ಹೂ ಮಡಿಗಳನ್ನು ನಿರ್ಮಿಸುವ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಜೊತೆಗೆ ಅಗತ್ಯ ಸ್ವಚ್ಛತೆ, ಭದ್ರತೆ, ನೀರು ಸರಬರಾಜು ಹಾಗೂ ವಿದ್ಯುತ್ ನಿರ್ವಹಣೆ, ಗುಲಾಬಿ ವನ, ಬೋನ್ಸಾಯ್ ಗಾರ್ಡನ್ ಮತ್ತು ಕ್ಯಾಕ್ಟೈ ಗಾರ್ಡನ್ ಇತ್ಯಾದಿಗಳನ್ನು ನಿರ್ವಹಿಸಲಾಗುತ್ತಿದೆ.

ಆ) ಲಾಲ್‌ಬಾಗ್ ಗೆ ಪ್ರವಾಸಿಗರ ಸಂಖ್ಯೆ 2008 ರಲ್ಲಿ 18.76 ಲಕ್ಷ ಇದ್ದು, 2009ರಲ್ಲಿ 20.16 ಲಕ್ಷಕ್ಕೆ ಹೆಚ್ಚಳವಾಗಿದೆ. ಇದರಿಂದ ರೂ.20.00 ಲಕ್ಷಗಳ ಹೆಚ್ಚಿನ ಆದಾಯ ಬಂದಿರುತ್ತದೆ. ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ.ಸಂ.	ವರ್ಷ	ಆದಾಯ	ಪ್ರವಾಸಿಗರ ಸಂಖ್ಯೆ
1	2008	187.60	18.76
2	2009	207.61	20.16

ಇ) ಇಲ್ಲ. ಆದರೆ ಬಂಡೆಯ ಹಿಂಬಾಗ ಮತ್ತು ಸುತ್ತಮುತ್ತಲೂ ಅಭಿವೃದ್ಧಿಯಾಗದೇ ಉಳಿದಿರುವ ಪ್ರದೇಶದಲ್ಲಿ ಎವರ್ ಗ್ರೀನ್ ಸಸ್ಯ ಪ್ರಭೇದಗಳನ್ನು ಹಾಗೂ ಇನ್ನಿತರ ಗಿಡ, ಮರ ಬಳ್ಳಿ ಮತ್ತು ಇತರೆ ಸಸ್ಯ ಪ್ರಭೇದಗಳನ್ನು ನೆಟ್ಟು ಬಂಡೆಗೆ ಯಾವುದೇ ಧಕ್ಕೆ ಬಾರದ ರೀತಿಯಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಿದೆ.

ಶ್ರೀ ಹ್ಯಾರಿಸ್ ಎನ್ ಎ(ಶಾಂತಿನಗರ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಖಂಡಿತವಾಗಿಯೂ ಲಾಲ್‌ಬಾಗ್ ಪ್ರದೇಶದಲ್ಲಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಸ್ವಲ್ಪ greenery ಅನ್ನು increase ಮಾಡುವಂಥ ಕೆಲಸ ನಾವು ಮಾಡಬೇಕಾಗುತ್ತದೆ. ಹಾಗೆಯೇ ಈ ಒಂದು ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ಯಾವ war Memorial ತಾವು ನಿಲ್ಲಿಸಿದ್ದೀರಿ, ಖಂಡಿತವಾಗಿ ಅದು ಬೆಂಗಳೂರಿಗೆ ತಾವು ಮಾಡಿರುವ ದೊಡ್ಡ ಕೊಡುಗೆಯಾಗಿದೆ. ಏಕೆಂದರೆ, ಇಂದಿರಾಗಾಂಧಿ ಮೆಮೋರಿಯಲ್‌ನಲ್ಲಿ ಏನು construction ಆಗುತ್ತಿತ್ತು ಅದನ್ನು ತಾವು ನಿಲ್ಲಿಸಿದ್ದೀರಿ. ಖಂಡಿತವಾಗಿ ಇವತ್ತಿನ ಒಂದು ನಿಟ್ಟಿನಲ್ಲಿ global warming ನಿಂದ ಆಗುತ್ತಿರುವ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ ನಾವೆಲ್ಲರೂ ಜವಾಬ್ದಾರಿಯಿಂದ ಇನ್ನೂ ಹೆಚ್ಚಿಗೆ ಗಿಡಗಳನ್ನು ನೆಟ್ಟು ನಮ್ಮ ಬೆಂಗಳೂರನ್ನು,

ಕರ್ನಾಟಕವನ್ನು, ಇಡೀ ರಾಷ್ಟ್ರವನ್ನು ಉಳಿಸುವಂಥ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಧನ್ಯವಾದಗಳು.

ಅರಕಲಗೂಡಿನಲ್ಲಿ ರೈತರ ಆತ್ಮಹತ್ಯೆಯ ಬಗ್ಗೆ

62(126) ಶ್ರೀ ರಾಮಲಿಂಗಾ ರೆಡ್ಡಿ:(ಬಿ ಟಿ ಎಂ ಲೇಔಟ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಕಲಗೂಡು ತಾಲ್ಲೂಕಿನಲ್ಲಿ ಇತ್ತೀಚೆಗೆ ಸಾಲಬಾಧೆ ತಾಳಲಾರದೆ ಇಬ್ಬರು ರೈತರು ಆತ್ಮಹತ್ಯೆಗೆ ಶರಣಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ಹಾಗಿದ್ದಲ್ಲಿ, ಮೃತಪಟ್ಟ ರೈತ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಿರುವುದೇ

ಇ) ಸಾಲ ಬಾಧೆಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್ ಎ ರವಿಂದ್ರನಾಥ್(ಕೃಷಿ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದೆ

ಆ) ಮೃತ ಪಟ್ಟ ರೈತ ಕುಟುಂಬಕ್ಕೆ ಪರಿಹಾರ ನೀಡುವ ಕ್ರಮ ಪ್ರಗತಿಯಲ್ಲಿದೆ. ವಿವರ ಈ ಕೆಳಗಿನಂತಿದೆ.

1. ಶ್ರೀ ಬಿ.ಎನ್. ಸತೀಶ್ ಬಿನ್ ನಿಂಗೇಗೌಡ ಚಿಕ್ಕ ಬೊಮ್ಮನ ಹಳ್ಳಿ ಗ್ರಾಮ, ಕೊಣನೂರು (ಹೋಬಳಿ), ಇವರು ದಿನಾಂಕ 19-03-2010 ರಂದು ಆತ್ಮಹತ್ಯೆ ಮಾಡಿಕೊಂಡಿದ್ದು. ಇವರ ಹಕ್ಕಿನಲ್ಲಿ ಕೃಷಿ ಭೂಮಿ ಇಲ್ಲದಿರುವುದರಿಂದ ರೈತಾಪಿ ವರ್ಗಕ್ಕೆ ಸೇರಿರುವುದಿಲ್ಲವೆಂದು ಸಮಿತಿಯು ತೀರ್ಮಾನಿಸಿ ಸರ್ಕಾರದಿಂದ ನೀಡುವ ಪರಿಹಾರಕ್ಕೆ ಅರ್ಹವಲ್ಲವೆಂದು ಈ ಪ್ರಕರಣವನ್ನು ತಿರಸ್ಕರಿಸಿದೆ.
2. ಶ್ರೀ ಸತ್ಯಮೂರ್ತಿ ಬಿನ್ ಕಾಳೇಗೌಡ, ಹನ್ಯಾಳು ಗ್ರಾಮ, ರಾಮನಾಥಪುರ (ಹೋಬಳಿ), ರವರು ದಿನಾಂಕ 04-06-2010ರಂದು ಆತ್ಮಹತ್ಯೆ ಮಾಡಿಕೊಂಡಿದ್ದು; ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳಾದ ಮಹಜರು ಆರ್.ಟಿ.ಸಿ ವಂಶ ವೃಕ್ಷ ಹಿಡುವಳಿ ಪತ್ರ ಖಾಸಗಿ ಬ್ಯಾಂಕು ಮತ್ತು ಸಹಕಾರ ಬ್ಯಾಂಕುಗಳಿಂದ ಮೃತರು ಪಡೆದಿರುವ ಸಾಲದ ವಿವರ, ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಗಳನ್ನು ಪಡೆಯಲಾಗುತ್ತಿದೆ. ಈ